# ಲಾಕ್‌ಡೌನ್ ಅನ್ನುವುದೇ ಭೀತಿ

**ಅಖಿಲಾ ಪ್ರಕಾಶ್**
ಉದಯದ 'ಅಣ್ಣಾ ತಂಗಿ' ತುಳಸಿ



◆ **ನಿಮ್ಮ ಪರಿಚಯ ಹೇಳಿ.**

ಕೊಡಗು ಮೂಲ, ಬೆಳೆದದ್ದು ಮೈಸೂರಿನಲ್ಲಿ. ಮೆಡಿಕಲ್ ಓದುವ ಕನಸು ನನಗಿತ್ತು, ಆದರೆ ಮಾಡಿದ್ದು ಬಿಕಾಂ. ಅಭಿನಯದತ್ತ ತೀರಾ ಆಕಸ್ಮಿಕವಾಗಿ ಬಂದಿದ್ದೇನೆ. ಸುವರ್ಣದಲ್ಲಿ 'ಪ್ಯಾಟೆ ಹುಡ್ಗೀರ್ ಹಳ್ಳಿ ಲೈಫು' 3ನೇ ಶ್ರೇಣಿಗೆ ನಾನೂ ಒಬ್ಬ ಸ್ಪರ್ಧಿಯಾಗಿ ಆಯ್ಕೆಯಾದೆ. ಆ ವೇದಿಕೆಯ ಮೂಲಕ ಸಿನಿಮಾಕ್ಕೆ ಪ್ರವೇಶ ಮಾಡಿದೆ.

◆ **ಸಿನಿಮಾ– ಸೀರಿಯಲ್ ಅನುಭವ ಹೇಗಿತ್ತು?**

ಸಿನಿಮಾ ಮತ್ತು ಸೀರಿಯಲ್ ನಡುವೆ ತುಂಬ ಅಂತರ ಇದೆ. ಸಿನಿಮಾದಲ್ಲಿ ದಿನಕ್ಕೆ ಒಂದೆರಡು ದೃಶ್ಯಗಳನ್ನು ಮಾತ್ರ ಮಾಡುತ್ತೇವೆ. ನಂತರ ಸ್ವಲ್ಪ ಬಿಡುವಿನ ಸಮಯವೂ ಸಿಗುತ್ತಿತ್ತು. ಆಗ ಅಭಿನಯಕ್ಕೆ ಸಿದ್ಧತೆ ಮಾಡಿಕೊಳ್ಳುವ ಜೊತೆ ವಿಶ್ರಮಿಸಲು ಸಾಧ್ಯವಾಗುತ್ತದೆ. ಸೀರಿಯಲ್‌ನಲ್ಲಿ ಹಾಗೆ ಆಗುವುದಿಲ್ಲ. ನಿರಂತರವಾಗಿ ಚಿತ್ರೀಕರಣ ನಡೆದಿರುತ್ತದೆ. ಬಿಡುವು ಇಲ್ಲದಷ್ಟು ಕೆಲಸದ ಒತ್ತಡ ಇರುತ್ತದೆ. ಮೊದಲು ತುಂಬ ಕಷ್ಟ ಆಗುತ್ತಿತ್ತು. ಕ್ರಮೇಣ ಅಭ್ಯಾಸ ಮಾಡಿಕೊಂಡೆ, ಸಿನಿಮಾ– ಧಾರಾವಾಹಿ ಎರಡನ್ನೂ ಸಮತೋಲನ ಮಾಡಿಕೊಂಡು ನಿರ್ವಹಿಸುತ್ತಿದ್ದೇನೆ.

◆ **ಮತ್ತೆ ಲಾಕ್‌ಡೌನ್ ಗುಮ್ಮ ಕಾಡುತ್ತಿದೆಯಲ್ಲ, ಈ ಬಗ್ಗೆ ಏನೆನಿಸುತ್ತದೆ?**

ಕೋವಿಡ್ ಸಂದರ್ಭದಲ್ಲಿ ಏಕದಂ ಕೆಲಸ ನಿಂತು ಬಿಡುತ್ತದೆ. ಬಿಡುವಿಲ್ಲದಷ್ಟು ಬಿಜಿಯಾಗಿರುವ ನಾವು ಇದ್ದಕ್ಕಿದ್ದಂತೆ ಸುಮ್ಮನೆ ಮನೆಯಲ್ಲಿ ಕೂರುವ ಸಂದರ್ಭ ಬರುತ್ತದೆ. ಹಿಂದಿನ ಎರಡು ಲಾಕ್‌ಡೌನ್ ಸಮಯದಲ್ಲಿ ತುಂಬ ಕಷ್ಟ ಆಗುತ್ತಿತ್ತು. ಆ ದಿನಗಳನ್ನು ನೆನಪಿಸಿಕೊಂಡರೆ, ಅದರ ಕರಾಳ ಛಾಯೆ ಭಯವನ್ನು ಹುಟ್ಟಿಸುತ್ತದೆ. ಸಮಕಾಲೀನ ಸಂದರ್ಭ ಕೂಡ ತುಂಬ ಹದಗೆಡುತ್ತಿದೆ. ಮುಂದೆ ಏನಾಗುತ್ತದೆಯೋ ಎನ್ನುವ ಆತಂಕ ಎಲ್ಲರಂತೆ ನನ್ನಲ್ಲಿಯೂ ಮೂಡಿದೆ. ಹಿಂದಿನ ಲಾಕ್‌ಡೌನ್‌ನಲ್ಲಿ ಚಿತ್ರೀಕರಣದ ಧ್ಯಾನ ಕಾಡುತ್ತಿತ್ತು. ಈಗಷ್ಟೇ ಫುಲ್ ವರ್ಕ್ ನಡೀತಾ ಇದೆ. ಇದೇ ಸಮಯಕ್ಕೆ ಕೊರೊನಾ ಆರ್ಭಟಿಸುತ್ತಿದೆ. ಕೆಲಸ ಇಲ್ಲದೇ ಮನೆಯಲ್ಲೇ ಇರುವುದು ತುಂಬ ಕಷ್ಟ.

◆ **ಲಾಕ್‌ಡೌನ್ ಕಾಲವನ್ನು ನೀವು ಹೇಗೆ ಬಳಸಿಕೊಂಡಿದ್ದೀರಿ?**

ಸಿನಿಮಾ ನೋಡುತ್ತಿದ್ದೆ. ನಟನೆಯನ್ನು ಅಭ್ಯಾಸ ಮಾಡುತ್ತಿದ್ದೆ. ಯಾವ ಪಾತ್ರವನ್ನು ಹೇಗೆ ಮಾಡಬೇಕು ಎನ್ನುವ ಲೆಕ್ಕಾಚಾರ ಹಾಕುತ್ತಿದ್ದೆ. ಲಾಕ್‌ಡೌನ್‌ಲ್ಲಿ ಅಡುಗೆ ಮಾಡುವುದನ್ನು ಚೆನ್ನಾಗಿ ಕಲಿತೆ. ಅದರಲ್ಲೂ ನಾನ್‌ವೆಜ್ ವಿಶೇಷಗಳು ಹೆಚ್ಚು ಕಲಿತೆ. ನಿತ್ಯದ ಸಣ್ಣಪುಟ್ಟ ಪದಾರ್ಥ ಮಾಡುವುದಕ್ಕಿಂತ ವಿಶೇಷ ಅಡುಗೆ ಮಾಡುವ ಆಸಕ್ತಿ ಹೆಚ್ಚು. ತುಂಬ ಇಷ್ಟಪಟ್ಟು ಚೆನ್ನಾಗಿ ಮಾಡುತ್ತೇನೆ. ಅದರಲ್ಲೂ ಕೂರ್ಗ್‌ಶೈಲಿಯ ಪೆಪ್ಪರ್ ಚಿಕನ್ ತುಂಬ ಇಷ್ಟ. ಅದಕ್ಕೆ ನಮ್ಮ ಸ್ಥಳೀಯ ಮಸಾಲೆ ಹಾಕಿ ಮಾಡುವುದೂ ಒಂದು ವಿಶೇಷ.

◆ **ನಟನೆಯನ್ನು ಹೇಗೆ ಅಭ್ಯಾಸ ಮಾಡಿದ್ರಿ?**

ರಿಯಾಲಿಟಿ ಶೋ ನಂತರ ಸಿನಿಮಾಗಳಿಗೆ ಅವಕಾಶ ಸಿಕ್ಕದೆ. ಆಗ ಡೈಲಾಗ್ ಹೇಗೆ ತೆಗೆದುಕೊಳ್ಳಬೇಕು ಎನ್ನುವುದೂ ಗೊತ್ತಿರಲಿಲ್ಲ. ರಿಯಾಲಿಟಿ ಶೋಗಳಲ್ಲಿ ನೈಜವಾಗಿ ಇರುವುದರಿಂದ ನಟನೆ ಅಂತ ಅನಿಸುತ್ತಿರಲಿಲ್ಲ. ನಟನೆಯ ದೃಷ್ಟಿಯಲ್ಲಿ ಕ್ಯಾಮೆರಾ ಎದುರುಗೊಳ್ಳುವ ಬಗ್ಗೆ ಕಲಿಕೆ ಅಗತ್ಯ ಅನಿಸಿತ್ತು. ಅಭಿನಯ ಆರಂಭಿಸುವ ಮುನ್ನ ಒಂದು ತಿಂಗಳು ತರಬೇತಿಯನ್ನು ತೆಗೆದುಕೊಂಡೆ.

ನಾನು ಮಾಡಿದ ಸಿನಿಮಾಗಳಲ್ಲಿ 'ರತ್ನಮಂಜರಿ' ಪಾತ್ರ ಏನೋ ಒಂದು ರೀತಿ ಕಾಡುವಂತಹ ಪಾತ್ರ. ಅದರಲ್ಲಿ ಫ್ಯಾಶನ್ ಡಿಸೈನರ್ 'ಗೌರಿ' ಆಗಿದ್ದೆ. ಅದು ಕರ್ನಾಟಕದ ಸಂಸ್ಕೃತಿಯನ್ನು ಬಿಂಬಿಸುವ ಕೆಲಸ ಮಾಡಿತ್ತು. ಅಂತಹ ಭಿನ್ನ ಪಾತ್ರಗಳನ್ನು ಮಾಡಬೇಕು. ನನ್ನ ಮೊದಲ ಸಿನಿಮಾ 'ಸೋಜಿಗ' ನಂತರ ನಾಲ್ಕೈದು ಸಿನಿಮಾಗಳಲ್ಲಿ ಕೆಲಸ ಮಾಡಿದ್ದೇನೆ. ಈಗ ಧಾರಾವಾಹಿ 'ಅಣ್ಣ ತಂಗಿ'ಗೆ ಬಂದಿದ್ದೇನೆ. ನನಗೆ ಅಣ್ಣನೇ ಪ್ರಪಂಚ. ಅಣ್ಣನಲ್ಲಿ ದೇವರನ್ನು ಕಾಣುವ ಕೃತಜ್ಞತಾಭಾವ ಈ ಪಾತ್ರದ ವಿಶೇಷ.

◆ **ಮುಂದಿನ ಪಾತ್ರದ ಕನಸಿನ ಬಗ್ಗೆ ಹೇಳುವುದಾದರೆ?**

ಪಾತ್ರ ಏಕಾತನತೆಯಿಂದ ಕೂಡಿರಬಾರದು. ವೈದ್ಯಳಾಗಿ ನಟಿಸುವ ಪಾತ್ರ ತುಂಬ ಇಷ್ಟ. ಪಾತ್ರಗಳು ಒಂದೇ ರೀತಿ ಇರುವುದು ಬೇಸರ ಅನಿಸುತ್ತದೆ. ನಟಿ ಸೌಂದರ್ಯ ಅವರಂತೆ ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು ಎನ್ನುವುದು ನನ್ನ ಬಯಕೆ. ನಾವು ನಿರೀಕ್ಷೆ ಮಾಡಿದಂತೆ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ನಾಯಕಿಯಾಗಿ ದೊಡ್ಡಮಟ್ಟದಲ್ಲಿ ಬೆಳೆಯಬೇಕು ಎನ್ನುವುದು ಆಸೆ. ಅದಕ್ಕೆ ಜನರ ಪ್ರೋತ್ಸಾಹ ಕೂಡ ಮುಖ್ಯ. ನನ್ನ ಪ್ರಯತ್ನ ಆ ನಿಟ್ಟಿನಲ್ಲಿ ಮಾಡುತ್ತೇನೆ. ಬಿಡುವಿನ ವೇಳೆ ಸುತ್ತಾಡುತ್ತೇನೆ. ರಜೆಯಿದ್ದಾಗ ಊರಲ್ಲಿ ಹೋಗಿ ತೋಟದಲ್ಲಿ ಕಾಲವನ್ನು ಕಳೆಯುತ್ತೇನೆ.

◆ **ಒಂದು ವೇಳೆ ನಟಿ ಆಗದಿದ್ದರೆ...**

ಡಾಕ್ಟರ್ ಆಗಬೇಕಾದವರು ನಟಿ ಆದೆ. ನಟಿಯೂ ಆಗದಿದ್ದರೆ ಯಾವುದಾದರೂ ಕೆಲಸ ಮಾಡುತ್ತಿದ್ದೆ. ಸಾಮಾನ್ಯವಾಗಿ ಬಹುರಾಷ್ಟ್ರೀಯ ಕಂಪನಿಗೆ ಸೇರಿರುತ್ತಿದ್ದೆ.

■ **ರಾಘವೇಂದ್ರ ಕೆ.**